**ದಿಃ-20-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ಪ್ರತಿವಾದಿ ಪರ ಶ್ರೀ. ಎ.ಎನ್.ಎಲ್ ವಕೀಲರಿಂದ ಃ**

1. ಪ್ರತಿವಾದಿಯವರ ಖುದ್ದು ಪರಿಚಯ ನನಗಿಲ್ಲ. ನಾನು ಪ್ರತಿವಾದಿಯವರಿಗೆ ಪ್ರತಿವಾದಿಯವರ ಮಗನಿಗೆ ವಿದ್ಯಾಭ್ಯಾಸಕ್ಕೆಂದು ಹಣ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪ್ರತಿವಾದಿಯವರ ಮಾವ ನಾರಾಯಣರಾವ್ ರವರು ಪ್ರತಿವಾದಿಯವರ ಮಗನಿಗೆ ವಿದ್ಯಾಭ್ಯಾಸಕ್ಕಾಗಿ ಹಣ ಬೇಕೆಂದು ಹೇಳಿ ನನ್ನಿಂದ ಹಣ ಕೊಡಿಸಿರುತ್ತಾರೆ.

2. ನಾನು ಖಾಸಗಿ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸಾಕ್ಷಿ ಮುಂದುವರಿದು ನಾರಾಯಣ ರಾವ್ ರವರು ಸಹ ನನ್ನೊಂದಿಗೆ ಅಲ್ಲಿಯೇ ಕೆಲಸ ಮಾಡುತ್ತಾರೆ. ನಾನು ಲೇವಾದೇವಿ ವ್ಯವಹಾರ ಮಾಡುತ್ತೇನೆ ಮತ್ತು ಹಲವಾರು ಮಂದಿಗೆ ಆ ರೀತಿ ಹಣ ನೀಡಿದ್ದೇನೆ ಎಂದರೆ ಸರಿಯಲ್ಲ.

3. ನಾನು ದಿನಾಂಕ 31.10.2019 ರಂದು ಪ್ರತಿವಾದಿಯವರ ಖಾತೆಗೆ 5 ಲಕ್ಷ ಹಣವನ್ನು ವರ್ಗಾವಣೆ ಮಾಡಿದ ದಿನ ಶೇ.18 ಬಡ್ಡಿ ಎಂದು ಮಾತುಕತೆಯಾಗಿರುತ್ತದೆ. ಸಾಕ್ಷಿ ಮುಂದುವರಿದು ನಾರಾಯಣ ರಾವ್ ರವರೇ ಪ್ರತಿವಾದಿಯೊಂದಿಗೆ ಬಡ್ಡಿಯನ್ನು ನಿಗದಿಪಡಿಸಿರುತ್ತಾರೆ. ನಾರಾಯಣ ರಾವ್ ರವರನ್ನು ನನ್ನ ಪರವಾಗಿ ಸಾಕ್ಷಿಯನ್ನಾಗಿ ಮಾಡಲು ಸಾಧ್ಯವಿಲ್ಲ ಕಾರಣ ಅವರು ಮರಣ

ಹೊಂದಿರುತ್ತಾರೆ. ಶೇ.18 ಬಡ್ಡಿಯೆಂದು ನಿಗದಿ ಪಡಿಸಿದ ಬಗ್ಗೆ ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳಿಲ್ಲ ಆದರೆ ಅವರು ಹಣ ತೆಗೆದುಕೊಂಡ ನಂತರ ಸ್ವಲ್ಪ ಸಮಯ ಆ ರೀತಿಯಾಗಿ ಬಡ್ಡಿಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

4. ಪ್ರತಿವಾದಿಯವರು 5 ಲಕ್ಷ ಹಣವನ್ನು ವಾಪಾಸು ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಡಿಸೆಂಬರ್ 2020 ರವರೆಗೆ ಶೇ.18 ಬಡ್ಡಿಯನ್ನು ನನಗೆ ನೀಡಿದ್ದಾರೆ ಎಂದರೆ ಸರಿ.

5. ನನ್ನ ಕಚೇರಿ ನಂ.37/12, ಅರ್ಚನಾ ಕಾಂಪ್ಲೆಕ್ಸ್, ಲಾಲ್ ಬಾಗ್ 4 ನೇ ಅಡ್ಡರಸ್ತೆ, ಬೆಂಗಳೂರಿನಲ್ಲಿ ಇದೆ ಎಂದರೆ ಸರಿ. ನನ್ನ ಮಗನ ಹೆಸರು ಎಲ್.ಆರ್.ಶರತ್ ಎಂದರೆ ಸರಿ. ಅವನ ಮೊಬೈಲ್ ಸಂಖ್ಯೆ 8095969667 ಆಗಿರುತ್ತದೆ. ಪ್ರತಿವಾದಿಯವರು ನನ್ನ ಮಗನ ಗೂಗಲ್ ಪೇಗೆ ಮತ್ತು ನನಗೆ ಖುದ್ದಾಗಿ ಹಣವನ್ನು ನೀಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಡಿಸೆಂಬರ್ 2020 ರವರೆಗೆ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಕೊಟ್ಟಿರುವಂತಹ 5 ಲಕ್ಷವನ್ನು ಬಡ್ಡಿಯೊಂದಿಗೆ ನನಗೆ ವಾಪಾಸು ನೀಡಿದ್ದಾರೆ ಎಂದರೆ ಸರಿಯಲ್ಲ.

6. ನಾನು 5 ಲಕ್ಷದ ದೊಡ್ಡ ಮೊತ್ತವನ್ನು ಸಾಲವಾಗಿ ನೀಡಿದ್ದರಿಂದ ನಾರಾಯಣ ರಾವ್ ರವರೇ ನಿಂತು ಭದ್ರತೆಗಾಗಿ ಪ್ರತಿವಾದಿಯವರಿಂದ ಕ್ರಯದ ಕರಾರು ಪತ್ರವನ್ನು ನಿ.ಪಿ.1 ರಂತೆ ಮಾಡಿಸಿ ನೀಡಿರುತ್ತಾರೆ. ನಾರಾಯಣ ರಾವ್ ರವರಿಗೆ ಹಣ

ಬೇಕಾಗಿದ್ದರಿಂದ ಅವರು ಈ ಕರಾರು ಪತ್ರವನ್ನು ನಿ.ಪಿ.1 ರಂತೆ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರವನ್ನು ನಾರಾಯಣ ರಾವ್ ರವರೇ ಮಾಡಿಸಿರುತ್ತಾರೆ. ಈ ಕರಾರು ಪತ್ರವನ್ನು ನಾನೇ ಮಾಡಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದರ ನಂತರ ಮತ್ತೆ 3 ಲಕ್ಷವನ್ನು ಪ್ರತಿವಾದಿಯವರು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು 5 ಲಕ್ಷವನ್ನು ವಾಪಾಸು ನೀಡಿದ ನಂತರವೇ ನಾನು 3 ಲಕ್ಷ ಸಾಲವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

7. ಪ್ರತಿವಾದಿಯವರಿಗೆ ನಿ.ಪಿ.1 ಕರಾರು ಪತ್ರದಲ್ಲಿ ನಮೂದಿಸಿದ ತಪಸೀಲಿನ ಆಸ್ತಿಯು ಅವರ ತಂದೆಯಿಂದ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ಕರಾರು ಪತ್ರವನ್ನು ಓದಿ ನಾನು ಸಹಿಯನ್ನು ಹಾಕಿರುತ್ತೇನೆ. ಅದರಲ್ಲಿ ಬರೆದ ಉಲ್ಲೇಖಗಳು ನನಗೆ ಗೊತ್ತಿದೆ. ಆ ದಾಖಲೆಯಲ್ಲಿ ಅವರಿಗೆ ತಂದೆಯಿಂದ ಬಂದಿದೆ ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ.

8. ಪ್ರತಿವಾದಿಯವರಿಗೆ ಎಷ್ಟು ಮಂದಿ ಅಣ್ಣ ತಮ್ಮಂದಿರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯವರಿಗೆ ಒಬ್ಬ ಅಕ್ಕ ಮತ್ತು ಒಬ್ಬ ತಂಗಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದು ಅವರಿಗೆ ತಂದೆಯವರಿಂದ ಬಂದ ಆಸ್ತಿಯಾದ್ದರಿಂದ ಪ್ರತಿವಾದಿಯವರು ಒಬ್ಬರೇ ಕರಾರು ಪತ್ರ ಮಾಡಲು ಸಾಧ್ಯವಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅದನ್ನು ನನಗೆ ನಾರಾಯಣ ರಾವ್ ರವರೇ

ಖುದ್ದಾಗಿ ನಿಂತು ಮಾಡಿಸಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರ ಮಗ ಅಪ್ರಾಪ್ತನಾಗಿದ್ದು ಆತನ ಸಹಿಯು ನಿ.ಪಿ.1 ರಲ್ಲಿ ಇಲ್ಲ ಎಂದರೆ ಸರಿ. ಅವರ ಮಗನಿಗೂ ನಿ.ಪಿ.1 ರ ತಪಸೀಲಿನ ಆಸ್ತಿಯಲ್ಲಿ ಭಾಗ ಬರಬೇಕಾಗಿದ್ದು ಆತನ ಸಹಿ ಇಲ್ಲದೇ ಇದ್ದುದ್ದರಿಂದ ನಿ.ಪಿ.1 ಕಾನೂನಿನಂತೆ ಊರ್ಜಿತವಲ್ಲ ಎಂದರೆ ನನಗೆ ಗೊತ್ತಿಲ್ಲ.

9. ನಿ.ಪಿ.1 ರ ತಪಸೀಲಿನ ಆಸ್ತಿಯ ಇಸಿಯನ್ನು ನಾನು ನೋಡಿರುವುದಿಲ್ಲ. ಪ್ರತಿವಾದಿಯವರ ತಂದೆಯವರು ಬದುಕಿರುವಾಗಲೇ ಆ ಸ್ವತ್ತಿನ ಒಂದು ಭಾಗವನ್ನು ಅವರ ಮಗಳಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**